ನಂಬರು.	ಸ್ಟೇಟ್ ಫಾರೆಸ್ಟ್ ವ ಪ್ಲಾಂಟೇಷ್ನ ಹೆಸರು.	ತಾಲ್ಲೂಕು.
1	ಸಖ್ತೂರ ಬೈಲ್ ಸ್ಟೇಟ್ ಫಾರೆಸ್ಟ್	ಶಿವಮೊಗ್ಗಾ
2	ಡಿಟೋ	ಡಿಟೋ
3	ಕಂಕರಗುಡ್ಡ ಸ್ಟೇಟ್ ಫಾರೆಸ್ಟ್	ಶಿವಮೊಗ್ಗಾ ಮತ್ತು ತೀರ್ಥಹಳ್ಳಿ.
4	ಆಲಕೊಳ ಸಂದಲ್ ಪ್ಲಾಂಟೇಷ್ನ	ಶಿವಮೊಗ್ಗಾ
5	ಅನವೆನಕಟ್ಟೆ ಸಂದಲ್ ಮತ್ತು ಸಾಗುವಾನಿ ಪ್ಲಾಂಟೇಷ್ನ	ಡಿಟೋ
6	ಉಬ್ರಾಣಿ ಕುಕ್ಕುವಾಡ ಸ್ಟೇಟ್ ಫಾರೆಸ್ಟ್	ಚನ್ನಗಿರಿ ತೀರ್ಕರೆ ಶಿವಮೊಗ್ಗಾ
7	ಕಾಳೀನಹಳ್ಳಿ ಸಾಗುವಾನಿ ಪ್ಲಾಂಟೇಷ್ನ	ಶಿಕಾರಿಪುರ
8	ಶಿಡ್ಲಹಳ್ಳಿ ಡಿಟೋ	ಸೊರಬ
9	ಕವಲ್ಲಿ ತೊಗರ್ಸಿ ಮತ್ತು ಬನವನಂದಿಹಳ್ಳಿ ಸ್ಟೇಟ್ ಫಾರೆಸ್ಟ್ ..	ಶಿಕಾರಿಪುರ
10	ತೆಲಗಡೆ ಪೆರುತ್ತು ಅರೇ ತೆಲಗಡ್ಡೆ ಸ್ಟೇಟ್ ಫಾರೆಸ್ಟ್	ಸೊರಬ
11	ಮಲೆಬೆನ್ನೂರ ಸ್ಟೇಟ್ ಫಾರೆಸ್ಟ್	ಹೊನ್ನಾಳಿ ಮತ್ತು ದಾವಣಗೆರೆ

ಇ. ಪಿ. ಲೌರಿ,
ಅಸಿಸ್ಟೆಂಟ್ ಕಲೆಕ್ಟರವೇಟರ್ ಆಫ್ ಫಾರೆಸ್ಟ್ಸ್.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಡಿಸ್ಟ್ರಿಕ್ಟ್ ಸೆಶನ್ಸ್ ಜಡ್ಜ್ ಯವರ ಕೋರ್ಟಿನಲ್ಲಿ.

1888ನೇ ಇಸವಿ ಅರ್ಜೀ ನಂಬರ್ 1100.

ಕಾರ್ಕಾಹಳ್ಳಿ ತಾಲ್ಲೂಕು ಸೋಮನಹಳ್ಳಿ ಹೋಬಳಿ ಗಬ್ಬಾಡಿ ಗ್ರಾಮದಲ್ಲಿದ್ದು ವ್ಯವಹರಿಸುತ್ತಿದ್ದ ಕರಿಬಸಪ್ಪನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಸಿದ್ದಬಸಪ್ಪ ಮೃತಪಟ್ಟ ಸದರೀ ಕರಿಬಸಪ್ಪನಿಗೆ ಮಗನು ಆಗಬೇಕೆಂಬ ಹಕ್ಕುದಾರೀ ಮೇಲೆ ಸ್ಥಾಪಿತಸ್ಥಳದ ಸಿದ್ದ ಬಸಪ್ಪನು ಗಬ್ಬಾಡಿ ವಾಸಸ್ಥನಾಗಿ ಮೃತಪಟ್ಟ ಕರಿಬಸಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಸಿದ್ದಬಸಪ್ಪನ ಅರ್ಜೀಯನ್ನು 1889ನೇ ಇಸವಿ ಜನವರಿ ತಿಂಗಳು ತಾರೀಖು 18ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕರಿಬಸಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1888ನೇ ಇಸವಿ ಅರ್ಜೀ ನಂಬರ್ 1068.

ಕಾರ್ಕಾಹಳ್ಳಿ ತಾಲ್ಲೂಕು ಬಿಜ್ಜವಹಳ್ಳಿಲಿದ್ದು ಮೃತಪಟ್ಟ ಪುಟ್ಟಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಕಾಳಯ್ಯ, ಮೃತಪಟ್ಟ ಸದರೀ ಪುಟ್ಟಯ್ಯನಿಗೆ ಮಗನು ಆಗಬೇಕೆಂಬ ಹಕ್ಕುದಾರೀ ಮೇಲೆ ಕಾರ್ಕಾಹಳ್ಳಿ ತಾಲ್ಲೂಕು ಕೋಡಿಹಳ್ಳಿ ಹೋಬಳಿ ಬಿಜ್ಜವಹಳ್ಳಿ ಸ್ಥಳದ ಕಾಳಯ್ಯನು ಸದರೀ ಬಿಜ್ಜವಹಳ್ಳಿ ವಾಸಸ್ಥನಾಗಿ ಮೃತಪಟ್ಟ ಪುಟ್ಟಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಕಾಳಯ್ಯನ ಅರ್ಜಿಯನ್ನು 1889ನೇ ಇಸವಿ ಜನವರೀ ತಿಂಗಳು ತಾರೀಖು 18ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪುಟ್ಟಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1888ನೇ ಇಸವಿ ಡಿಸಂಬರ್ ತಿಂಗಳು 19ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1888ನೇ ಇಸವಿ ಅರ್ಜೀ ನಂಬರ್ 1146.

ಕೋಲಾರ ಡಿಸ್ಟ್ರಿಕ್ಟ್ ಬೌರಿಂಗ್‌ಪೇಟೆ ತಾಲ್ಲೂಕು ಸೂಲಕುಂಟೆ ಮಾದಮಂಗಲದಲ್ಲಿದ್ದು ಮೃತಪಟ್ಟನಂಜಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರಳು ನಂಜಮ್ಮ, ಮೃತಪಟ್ಟ ಸದರೀ ನಂಜಪ್ಪನಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಸೂಲಕುಂಟೆ ಮಾದಮಂಗಲದ ಸ್ಥಳದ ನಂಜಮ್ಮನು ಸೂಲಕುಂಟೆ ಮಾದಮಂಗಲದ ವಾಸಸ್ಥನಾಗಿ ಮೃತಪಟ್ಟ ನಂಜಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬ್ಯೈ ಈಕೋರ್ಟ್‌ಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ನಂಜಿಮ್ಮನ ಅರ್ಜೀಯನ್ನು 1889ನೇ ಇಸವಿ ಫಿಬ್ರವರೀ ತಿಂಗಳು ತಾರೀಖು 8ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೇ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಂಜಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯ ಪಡಿಸಿ ಇದೆ.

1888ನೇ ಇಸವಿ ಡಿಸಂಬರ್ ತಿಂಗಳು 21ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸೀ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1888ನೇ ಇಸವಿ ಅರ್ಜೀ ನಂಬರ್ 1111.

ಮೃತಪಟ್ಟ ಮೆ॥ ವಿ. ಡಿ. ಪೊನ್ನರಂಗಂ ಮೊದಲಿಯಾಲ್ ಅಸಿಸ್ಟೆಂಟ್ ಕಮ್ಮಿಷನರ್ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು 1ನೇ ಹಂಸಪತಿ 2ನೇ ತಾರಪತಿ ಮೈನರ್ ಇವರುಗಳ ಗಾರ್ಡಿಯ್ಯಪಾಪತಿ ಅಮ್ಮಾಳ್ ಯೆಂಬುವರು ಮೃತಪಟ್ಟ ಸದರೀ ಮೆ॥ ವಿ. ಡಿ. ಪೊನ್ನರಂಗಂ ಮೊದಲಿಯಾರ್‌ಗೆ ಮೈನರುಗಳು, ಮುಕ್ತಳಾಗಬೇಕೆಂದೂನ್ನೂ ತಾನು ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಬೆಂಗಳೂರ್ ಲಷ್ಕರ್ ಲೈಕ್ ಸ್ಥಳದ 1ನೇ ಹಂಸಪತಿ 2ನೇ ತಾರಪತಿ ಮೈನರ್‌ಗಳು ಇವರ ತಾಯಿ ಖೂಪತಿ ಅಮ್ಮಾಳು ಗಾರ್ಡಿಯ್ಯ ಆಗಿ ಸದರೀ ಲಷ್ಕರ್ ಲೈನಿನಲ್ಲಿ ವಾಸಸ್ಥರಾಗಿ ಮೃತಪಟ್ಟ ಮೆ॥ ವಿ. ಡಿ. ಪೊನ್ನರಂಗಂ ಮೊದಲಿಯಾರ್ರ ಜಿಂದಗೀ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬ್ಯೈ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.-

ಸದರೀ ದರಖಾಸ್ತುದಾರರಾದ ಖೂಪತಿ ಅಮ್ಮಾಳ್ ಅರ್ಜೀಯನ್ನು 1889ನೇ ಇಸವಿ ಜನವರೀ ತಿಂಗಳು ತಾರೀಖು 18ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೇ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮೆ॥ ವಿ. ಡಿ. ಪೊನ್ನರಂಗಂ ಮೊದಲಿಯಾರ್ರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1888ನೇ ಇಸವಿ ಅರ್ಜೀ ನಂಬರ್ 1044.

ಮೃತಪಟ್ಟ ಚನ್ನವೀರಯ್ಯನ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಚಿಕ್ಕ ಬಳ್ಳಾಪುರದಲ್ಲಿರುವ ವಾಬನಂಸ್ಕ್ರದ ಗವುರಮ್ಮನು ಮೃತಪಟ್ಟ ಸದರೀ ಚನ್ನವೀರಯ್ಯನಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ದೊಡ್ಡಬಳ್ಳಾಪುರ ತಾಲ್ಲೂಕು ತೂಬುಗೆರೆ ಹೋಬಳಿ ದೊಡ್ಡಮುದ್ದಯ್ಯನಹಳ್ಳಿ ಸ್ಥಳದಲ್ಲಿ ವಾಸಸ್ಥರಾಗಿ ಮೃತಪಟ್ಟ ಚನ್ನವೀರಯ್ಯನ ಜಿಂದಗೀ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬ್ಯೈ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಗವುರಮ್ಮನ ಅರ್ಜೀಯನ್ನು 1889ನೇ ಇಸವಿ ಜನವರಿ ತಿಂಗಳು ತಾರೀಖು 18ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೇ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚನ್ನವೀರಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1888ನೇ ಇಸವಿ ಡಿಸಂಬರ್ ತಿಂಗಳು 22ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮದಸ್ತಖತ್ತೊಡನೆ ಕೊಡೋಣಾಗಿದೆ

ದಿವಾಳಿಯಾದ ಡಿಕ್ರೀ ದೇಸೇದಾರ ಬೆಂಗಳೂರು ಆರಳೇಪೇಟೇಲಿರತಕ್ಕ ಅಚ್ಚಮ್ಮನವರ ನರಸುಪ್ಪಯ್ಯನ ವಿಷಯದಲ್ಲಿ—

ಸ॥ 1888ನೇ ಇಸವಿ ದಿವಾಳಿ ಕೇಸ್ ನಂಬರ್ 932.

ಹುಕ್ಕುಂ.

ಮೇಲ್ಕಂಡ ನರಸುಪ್ಪಯ್ಯನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಕವು ಸೆಪ್ ಜಡ್ಜರಾದ ಮೆ॥ ಸಿ. ಕ್ಯಸ್ ಸಾಹೆಬರವರ ರೂಬರೂ ಅರ್ಜೀದಾರನಾದ ನರಸುಪ್ಪಯ್ಯನ್ನ ಖುದ್ದಾಗಿಯೂ ಮತ್ತು ಸದರೀಯವನ ಲೇಣೇದಾರ್ರಾದ 1ನೇ ಕ್ರೆಡಿಟರ ತರಫೆ ಫ್ರೀಡರ್ ಗಂಗಾಧರಯ್ಯನವರಿಗೂ ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟೀಸು ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ—2ನೇ ಕ್ರೆಡಿಟರು ಹಾಜರಾಗಲಿಲ್ಲಾ.

ಸಿವಿಲ್ ಪ್ರೊಸೆಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ನರಸುಪ್ಪಯ್ಯನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟರುತ್ತೆಯಾಗಿ ಸದರೀ ದಿವಾಳಿಯಾದವನನ್ನ ನಿರ್ಬಂಧದಿಂದ ವಿನೋಜನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧವಡುವ ಜವಾಬ್ದಾರಿಯಿಂದ ಸಹ ಅವನನ್ನ ನಿಜಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ॥ 1888ನೇ ಇಸವಿ ಡಿಸಂಬರ್ 21ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮದಸ್ತಖತ್ತಿನಿಂ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರ್.	ಲೇಣೇದಾರು, ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹುಲಿ ತಿಳಿಯ ಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ಬೇಕೋ ಆಗ ಕೊಡತಕ್ಕದ್ದು.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾದರೂ ಇದ್ದರೆ.	ಟಿಪ್ಪಣಿ.
1	ಬೆಂಗಳೂರು ಕರ್ನಾಟಕ ಬ್ಯಾಂಕ್ ..	387—0—3	..	1877ನೇ ಇಸವಿ ಲೇಟ್ ಸ್ಮಾಲ್ ಕಾಜ್ ಕೋರ್ಟ್ 638ನೇ ನಂಬರ್, ಡಿಕರಿ ಮೊಬಲಗು.	
2	ಡಿಟೋ ಧನಾಭಿವೃದ್ಧಿ ಬ್ಯಾಂಕ್ ..	113—0—0	..	ಡಿಕರಿ ಬಾ|| ಇದರ ತಪಶೀಲ್ ಇಲ್ಲ.	
	ಜುಮ್ಲಾ	500—0—3			

ಸಿ. ಕ್ರೈನ್,
ಸಬ್ ಜಡ್ಜ.

ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

1888ನೇ ಇಸವಿ ಅರ್ಜೀ ನಂಬರ್ 291.

ಮೃತಪಟ್ಟ ಬಕ್ಷಿ ಪುಟ್ಟಮಲ್ಲಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು 1ನೇ ಸಂಗಪ್ಪ 2ನೇ ಗುರುಬಸಪ್ಪ ಮೈನರ್ ಗಾರ್ಡಿಯರ್ ತಾಯಿ ಸಿದ್ದಾಜಮ್ಮನವರು ಮೃತಪಟ್ಟ ಸದರೀ ಪುಟ್ಟಮಲ್ಲಪ್ಪನವರಿಗೆ ಮಕ್ಕಳು ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಬಸವನ ಮೊಹಲಾ ಸ್ಥಳದ ಸದರೀ ಸಿದ್ದಾಜಮ್ಮನವರು ಸದರೀ ವಾಸಸ್ಥರಾಗಿ ಮೃತಪಟ್ಟ ಪುಟ್ಟಮಲ್ಲಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ 800 ರೂಪಾಯಿ ಸಾಲವನ್ನು ವಸೂಲ್ ಮಾಡುವ ದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬ್ಯಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸಿದ್ದಾಜಮ್ಮನವರ ಅರ್ಜೀಯನ್ನು 1889ನೇ ಇಸವಿ ಜನವರಿ ತಿಂಗಳು ತಾರೀಖು 28ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಕಿ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪುಟ್ಟಮಲ್ಲಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಟ್ಟಿದೆ.

1888ನೇ ಇಸವಿ ಅರ್ಜೀ ನಂಬರ್ 293.

ಮೃತಪಟ್ಟ ವೆಂಕಟಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು 1ನೇ ಹುಚ್ಚಣ್ಣ 2ನೇ ದಾಸಂಣ ಸಹ ಮೃತಪಟ್ಟ ಸದರೀ ವೆಂಕಟಪ್ಪನವಂಗೆ ತಮ್ಮಿಂದಿರು ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ದೇವರಾಜ ಮೊಹಲಾ ಸ್ಥಳದ ಸದರೀ ಹುಚ್ಚಣ್ಣ ದಾಸಂಣನವರು ಸದರೀ ವಾಸಸ್ಥರಾಗಿ ಮೃತಪಟ್ಟ ವೆಂಕಟಪ್ಪನವರ ಜಿಂದಗೀ ಬಗ್ಯಾಗಿ ಬರತಕ್ಕ 300 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬ್ಯಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೇ ಹುಚ್ಚಣ್ಣ 2ನೇ ದಾಸಂಣ ಇವರುಗಳ ಅರ್ಜೀಯನ್ನು 1889ನೇ ಇಸವಿ ಜನವರಿ ತಿಂಗಳು ತಾರೀಖು 28ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಕಿ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಟ್ಟಿದೆ.

1888ನೇ ಇಸವಿ ಅರ್ಜೀ ನಂಬರ್ 295.

ಮೃತಪಟ್ಟ ಪಾಪಕಟ್ಟರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ವೆಂಗಟ ಮೈನರ್ ಗಾರ್ಡಿಯರ್ ಮತ್ತು ತಾಯಿಯಾದ ಪಾಪಚ್ಚಮ್ಮನವರು ಮೃತಪಟ್ಟ ಸದರೀ ಪಾಪಕಟ್ಟರಿಗೆ ಮಗ, ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಹುಣಸೂರು ತಾಲ್ಲೂಕು ಗಾವಡಗೆರೆ ಹೋಬಳಿ ಹಾರುಹಳ್ಳಿ ಸ್ಥಳದ ಸದರೀ ಪಾಪಚ್ಚಮ್ಮನವರು ಸದರೀ ವಾಸಸ್ಥರಾಗಿ ಮೃತಪಟ್ಟ ಪಾಪಕಟ್ಟರ ಜಿಂದಗೀ ಬಗ್ಯಾಗಿ ಬರತಕ್ಕ 250 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬ್ಯಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಪಾಪಚ್ಚಮ್ಮನವರ ಅರ್ಜೀಯನ್ನು 1889ನೇ ಇಸವಿ ಜನವರಿ ತಿಂಗಳು ತಾರೀಖು 28ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೀಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪಾಪಕಟ್ಟರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಟ್ಟಿದೆ.

1888ನೇ ಇಸವಿ ಡಿಸಂಬರ್ ತಿಂಗಳು 20ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಾನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಸ್. ಹೇಮಾಜಿರಾವ್, ಡಿಸ್ಟ್ರಿಕ್ಟ್ ಜಡ್ಜ.

ಕೋಲಾರ ಡಿಸ್ಟ್ರಿಕ್ಟ್.

ತಾರೀಖು 21ನೇ ಡಿಸಂಬರ 1888.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ, ಈ ಕೆಳಗೆ ವಿವರಸೋಣವ ರಿಜಿಸ್ಟ್ರಾರಗಳವರ ಆಫಿಸಿನಲ್ಲಿ ಹಾಜರಾದ ತಂ ಸೂಕುಗಳು ಬೇವಾರಸ್ ಆಗಿ ಯರಡು ವರುಷಗಳಿಗೆ ಮೇಲ್ಪಟ್ಟು ನಿಂತಿರುತ್ತವೆ ಅವುಗಳನ್ನು ಹಾಜರ್ಮಾಡಿದವರೆ ಆಗಲಿ ಅವುಗಳಲ್ಲಿ ಬಾ ಧ್ಯತೆ ವುಳ್ಳವರೆ ಆಗಲಿ ಈ ನೋಟಿಫಿಕೇಷ್ಯ ತಾರೀಖು ಲಾಗಾಯತು ವೊಂದು ತಿಂಗಳೊಳಗಾಗಿ ಆಯಾ ಸಬ್ ರಿಜಿಸ್ಟ್ರಾರಗಳಲ್ಲಿ ಹಾ ಜರಾಗಿ ವಾಜಬಿ ಫೀಜು ಪಾವತಿ ವೂಡಿ ವಾಪಸ್ ಪಡೆಯಬಹುದು ಯಿಲ್ಲವಾದರೆ ರಿಜಿಸ್ಟ್ರೇಷ್ಯ ಆಕ್ಟು 85ನೇ ಸೆಕ್ಷ್ಯ ಪ್ರಕಾರ ಅವುಗ ಳು ನಾಕಪಡಿನಲ್ಪಡುವವು.

ಆಫೀಸಿನ ಹೆಸರು.	ದಸ್ತಾವೇಜಿನ ಮತ್ತು ಬುಕ್ಕು ನಂಬರ್.	ಕಕ್ಷಿಗಾರರು. ದಸ್ತಾವೇಜುಬರದು ಕೊಟ್ಟವನ ಹೆಸರು ಮತ್ತು ತಪಸೀಲ್.	ಕಕ್ಷಿಗಾರರು. ದಸ್ತಾವೇಜು ಬರಿಸಿಕೊಂಡವನ ಹೆಸರು ಯಾ ತಪಸೀಲ್.	ದಸ್ತಾವೇಜಿನ ತಾರೀಖು.	ರಿಜಸ್ಟ್ರಿ ಬಗ್ಗೆ ಹಾಜರಾದ ತಾರೀಖು.	ರಿಜಸ್ಟ್ರಿ ಆದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
ಗೋರಿಬಿದನೂರು ತಾಲ್ಲೂಕು ಸಬ್ ರಿಜಿಸ್ಟ್ರಿ ಆಫೀಸ್.	1ನೇ ನಂಬರ್ ಬುಕ್ಕು 11ನೇ ನಂ. ವಲ್ಯೂಂ 1885—86 186ನೇ ನಂ.	ಗೋರಿಬಿದನೂರು ತಾಲ್ಲೂಕು ಜೋಡಿ ಆದಿ ಕೊಪ್ಪದಲ್ಲಿರುವ ತಿಂ ಮನಾಯಕನ ಮಗ ಗ ವಿರಂಗ	ಶ್ಯಾಂಪುರದಲ್ಲಿರುವ ಅನಂತಾಚಾರ್ರು	85ನೇ ಇಸವಿ ಅಕ್ಟೋಬರ್ ತಾರೀಖು 21	85ನೇ ಅಕ್ಟೋಬರ್ 23	85ನೇ ಇಸವಿ ಅಕ್ಟೋಬರ್ 23	ಏರಿಸಿಕೊಂಡವನಿಗೆ ಕೊಡಬೇಕಾದ 50 ರೂಪಾಯಿಗಳಿಗೆ ಆತನ ಅನುಭವದಲ್ಲಿ ಇರುವ ತನ್ನ ಬಾಬತು ತರಿ ಜಮೀನನ್ನು ಕುದ್ದಭೋಗ್ಯಮಾಡಿರುವದಾಗಿ ಬರದುಕೊಟ್ಟ ಭೋಗ್ಯಪತ್ರ.
	1ನೇ ನಂ. ಬುಕ್ಕು 85—86 12ನೆ ವಾಲ್ಯೂಂ 272ನೇ ನಂ.	ಗೋರಿಬಿದನೂರು ತಾಲ್ಲೂಕು ವರವಣಿ ಗ್ರಾಮದಲ್ಲಿರುವ ಬಳಿಜಟ್ಟಪ್ಪನಮಗ ಅಂಜಿಪ್ಪ	ವರವಣಿ ಗ್ರಾಮದಲ್ಲಿರುವ ತೆಲಗುಬಣಜಿಗರ ನರಸಪ್ಪ	86ನೇ ಇಸವಿ ಫಿಬ್ರವರಿ ತಾರೀಖು 20	86ನೇ ಇಸವಿ ಫಿಬ್ರವರಿ 20	86ನೇ ಇಸವಿ ಫಿಬ್ರವರಿ 20	ವರವಣಿ ಗ್ರಾಮದಲ್ಲಿರುವ ತನ್ನ ಸ್ವಂತಮನೆ ವಠಾರ ಸಹ 15 ರೂಪಾಯಿಗಳಿಗೆ ಏರೀದಿಗೆ ಕೊಟ್ಟ ಪತ್ರ.
	86-87ನೇ ಇಸವಿ 1ನೇ ಬುಕ್ಕು ನಂ. 12	ಹೊಸೂರು ಗ್ರಾಮದಲ್ಲಿರುವ ಪಂಚಾಂಗದ ಕೃಷ್ಣಾಚಾರ್ರು	ಹೊಸೂರಿನಲ್ಲಿರುವ ವೆಂಕಟೇಕಯ್ಯನ ಮಗ ಗುರಪ್ಪ	86ನೇ ಇಸವಿ ಮೇ 1	86ನೇ ಇಸವಿ ಮೇ 1	86ನೇ ಇಸವಿ ಮೇ 2	(200) ರೂಪಾಯಿಗಳುಸಾಲತೆಗದುಕೊಂಡು ನಾಲ್ಕು ತರೀ ಖುಷ್ಕಿ ಜಮೀನುಗಳನ್ನ ಆಧಾರಮಾಡಿ ಬರದುಕೊಟ್ಟ ಪತ್ರ.
	86-87ನೆ ಇಸವಿ 1ನೇ ಬುಕ್ಕು ನಂ. 13	ಹೊಸೂರು ಗ್ರಾಮದಲ್ಲಿರುವ ಪಂಚಾಂಗದ ಕೇಷಭಟ್ಟರ ಮಗ ವೆಂಕಟೇಕಭಟ್ಟರು	ಡಿಟೋ	86ನೇ ಇಸವಿ ಏಪ್ರಿಲ್ 9	ಡಿಟೋ	ಡಿಟೋ	(200)ರೂಪಾಯಿಗಳು ಸಾಲತೆಗದುಕೊಂಡುನಾಲ್ಕು ಜಮೀನುಗಳನ್ನ ಆಧಾರಮಾಡಿ ಬರದುಕೊಟ್ಟ ಪತ್ರ.
	8586 ನೇ ಇಸವಿ 1ನೇ ನಂಬರ್ ಬುಕ್ಕು 120ನೇ ನಂ.	ಮೆಡಿಹಾಳ ಗ್ರಾಮದ ಜೋಡೀದಾರ ವೆಂಕಟಪ್ಪನ ಕೊಮಾರ ಚಿಕ್ಕ ವೆಂಬರಳಿಪ್ಪ	ಮೆಡಿಹಾಳ ಗ್ರಾಮದಲ್ಲಿರುವ ಪಾಪಂಣ ನಮಗೆ ಗೋಪಾಳಿಗ	85ನೇ ಇಸವಿ ಜೂ 13	85ನೇ ಇಸವಿ ಡಿಸಂಬರ್ 10	85ನೇ ಇಸವಿ ಡಿಸಂಬರ್ 10	(200)ರೂಪಾಯಿಗಳು ಸಾಲ ತಗದುಕೊಂಡು ಜಮೀನ್ ಭೋಗ್ಯವೂಡಿರುವದಾಗಿ ಪತ್ರ.
ಕೋಲಾರದ ಸಬ್ ರಿಜಿಸ್ಟ್ರಾರ ಆಫೀಸ್.	85-86ನೇ ಇಸವಿ 1ನೇ ಬುಕ್ಕು 185ನೇ ನಂಬರ್	ಕೋಲಾರ ಮುನಸೀಫ್ ಕೋರ್ಟಿನಿಂದ ಕೊಡಲ್ಪಟ್ಟ ವಿಕ್ರಯದ ಸರ್ಟಿಫಿಕೇಟು	ಲಾಯರು ವೆಂಕಟಾಚಾರ್ರು	85ನೇ ಇಸವಿ ಜೂ 12	86ನೇ ಇಸವಿ ಫಿಬ್ರವರಿ 11	86ನೇ ಇಸವಿ ಫಿಬ್ರವರಿ 15	ಕಾಯಂಗುತ್ತಾ ಕೆಂಬಾಪುರ ಗ್ರಾಮದಲ್ಲಿ ಪ್ರತಿವಾವಿಗೆಯಿರತಕ್ಕ ಹಕ್ಕನ್ನ 10—8—0ಕೊಂಡುಕೊಂಡದ್ದಕ್ಕೆ ಕೊಟ್ಟ ಸರ್ಟಿಫಿಕೇಟು.
	86-87ನೇ ಇಸವಿ 1ನೇ ಬುಕ್ಕು 26ನೆ ನಂ.	ಪಡ್ಲಪಟ್ಟು ತಾಲ್ಲೂಕು ಆನೆಮಡು ಗ್ರಾಮದಲ್ಲಿರುವ ರಾಮಯ್ಯ	ಕೋಲಾರ ತಾಲ್ಲೂಕು ವಕ್ಕಲೇರಿಗ್ರಾಮದಲ್ಲಿರುವ ವೆಂಕಂಭಟ್ಟರು	86ನೇ ಇಸವಿ ಮೇ 15	85ನೇ ಇಸವಿ ಮೇ 15	86ನೇ ಇಸವಿ ಮೇ 15	ವಕ್ಕಲೇರಿ ಗ್ರಾಮದ ನಂಬರ್ 126ನೇ ಭೂಮಾನ್ಯದಲ್ಲಿ ಅರ್ಧ ಜಮೀನು (40) ರೂಪಾಯಿಗಳಿಗೆ ಕ್ರಯವಮಾಡಿಕೊಟ್ಟಿರುವದಾಗಿ ಕ್ರಯಪತ್ರ.

ಆಫೀಸಿನ ಹೆಸರು.	ದಸ್ತಾವೇಜಿನ ನಮ್ಮ ಬಕ್ಕು ನಂಬರು.	ಕಕ್ಷಿಗಾರರು. ದಸ್ತಾವೇಜು ಬರದು ಕೊಟ್ಟವನ ಹೆಸರು ಮತ್ತು ತಹಸೀಲ್.	ದಸ್ತಾವೇಜು ಬರಿಸಿ ಕೊಂಡವನ ಹೆಸರು ಯಾ ತಹಸೀಲ್.	ದಸ್ತಾವೇಜಿನ ತಾರೀಖು.	ರಿಜಿಸ್ಟ್ರಿ ಬಗ್ಗೆ ಹಾಜರಾದ ತಾರೀಖು.	ರಿಜಿಸ್ಟ್ರಿ ಆದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
ಬದಿಂಸೆಪ್ಟಿ ತಾಲ್ಲೂಕು ಸಬ್ ರಿಜಿಸ್ಟ್ರಿ ಆಫೀಸ್.	86-87ನೇ ಇಸವಿ 2ನೇ ಬುಕ್ಕು ನಂ. 2	ಅಂಕಿತಟ್ಟಪಳ್ಳಿ ವಾಣಿ ತಿಮ್ಮಸಂದ್ರದ ಶಾನುಭಾಗ ಗುಂಡಪ್ಪ ಲೇಗೌಡ	..	85ನೇ ಇಸವಿ ಜನವರಿ 12	86ನೇ ಇಸವಿ ಆಗಸ್ಟು 7	ಶ್ರೇತಮಂಗಲದ ಹೋಬಳಿ ಗೊಲ್ಲಹಳ್ಳಿ ಕೆರೆಕೆಳಗಿನ ತರೀ ಜಮ್ಮಾ 237–244–246ನೇ ನಂಬರು ಬಗೆ ಅಧಾರವಾಡಿ (250) ರೂಪಾಯಿಗಳು ತೆಗದುಕೊಂಡು ಇದ್ದೇನೆಂದು
	86-87ನೇ ಇಸವಿ 2ನೇ ಬುಕ್ಕು ನಂ. 1	ನೂಲಿಕುಂಟಿ ಶ್ರೀನಿವಾಸಾಚಾರ್ಯ	ವಕ್ಕಲೇರಿಯಲ್ಲಿರುವ ಚಿರವೆಲು ನಾಗಪ್ಪನಮಗವರದಪ್ಪ	..	7–5–86	6—6—87	ನೂಲಿಕುಂಟಿ ಗ್ರಾಮದ ಬಳಿ ಯಿರುವ ತೊಪಿನ ಹುಣಿಮರಗಳ ಫಸಲನ್ನಲ್ಲಿಮೂರಲ್ಲಿ ಬಂದು ಹಸ್ಯೆ (40) ರೂಪಾಯಿನ ಬಡ್ಡಿಗಾಗಿ ಭೋಗ್ಯಮಾಡಿರುತ್ತೆಂದು ವಗೈರೆ

ಅಬ್ದುಲ್‌ರಹಿಮ್ಮಾ,
ಅಫಿಷಿಯೇಟಿಂಗ್ ರಿಜಿಸ್ಟ್ರಾರ್.

ಮೈಸೂರು ಡಿಸ್ಟ್ರಿಕ್ಟ್

ನಂ. 6, ತಾರೀಖು ನೇ 1888.

ಯಡತೊರೆ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿರುವ ದಸ್ತಾವೇಜು ರಿಜಿಸ್ಟ್ರಿ ಆದ ತಾರೀಖು ಲಾಗಾಯತು 2 ವರುಷದಿಂದ ಬೇವಾರಸಾಗಿ ಬಿಟ್ಟಿರುವದ್ದರಿಂದ ಈ ಇಸ್ತಿಹಾರ್ ತಾರೀಖು ಲಾಗಾಯತು ಒಂದು ತಿಂಗಳೊಳಗಾಗಿ ದಸ್ತಾವೇಜು ಹಾಜರ್ಮಾಡಿದವನಾಗಲಿ ಅಥವಾ ಆತನ ಕ್ರಮವಾದ ಮುತಾಲೀಕನಾಗಲಿ ಸಬ್ ರಿಜಿಸ್ಟ್ರಾರಲ್ಲಿ ಹಾಜರಾಗಿ ವಾಪಸ್ ಪಡೆಯಬೇಕು, ಹಾಗೆ ವಾಪಸ್ ಪಡೆಯದಿದ್ದರ ರಿಜಿಸ್ಟ್ರೇಷ್ ಆಕ್ಟು 85ನೇ ಸೆಕ್ಷನ್ ಮೇರೆಗೆ ನಾಶಪಡಿಸಲ್ಪಡುತ್ತೆ.

ನಂಬರ್	ದಸ್ತಾವೇಜನ್ನು ಬರದು ಕೊಟ್ಟವನ ಹೆಸರು ಮತ್ತು ಅಡಿರ್ಸ.	ದಸ್ತಾವೇಜನ್ನು ಬರಿಸಿ ಕೊಂಡವನ ಹೆಸರು ಮತ್ತು ಅಡಿರ್ಸ.	ರಿಜಿಸ್ಟ್ರಿಗೆ ಹಾಜರಾದ ಸಾಲ್‌ವಾರಿ ತಾರೀಖು	ರಿಜಿಸ್ಟ್ರಿ ಆದ ತಾರೀಖು	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
603 ——— 1886—87	ಯಡತೊರೆ ತಾಲ್ಲೂಕು ಮೆಲೂರಿನಲ್ಲಿ ಇರುವ ಕೃಷಿವಾಚಾರದ ಈರಪ್ಪಯ್ಯನವಮಗ ಬಳೆ ವ್ಯಾಪಾರದ ಲಿಂಗಯ್ಯ	ಯಡತೊರೆ ತಾಲ್ಲೂಕು ಮೆಲೂರಿನಲ್ಲಿ ಇರುವ ಕೃಷಿವಾಚಾರದ ಜಾತಿ ಬೊಡ್ಡಪ್ಪಯ್ಯನ ಮಗ ಯವಾರ ಕ್ಷಸಬಿನ ಗುರುಲಿಂಗಪಟ್ಟಿ	14—10—86	22—10—86	ಭೂಸ್ಥಿತಿ ಕ್ರಯಪತ್ರ ರೂಪಾಯಿ (200)

ಟಿ. ಆನಂದರಾವ್,
ರಿಜಿಸ್ಟ್ರಾರ್.

ಹಾಸನ ಡಿಸ್ಟ್ರಿಕ್ಟ್.

ತಾರೀಖು 17ನೇ ಡಿಸಂಬರ್ 1888ನೇ ಇಸವಿ.

1. ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಹಾಸನ ಡಿಸ್ಟ್ರಿಕ್ಟ್ ಮಂಜರಾಬಾದ್ ತಾಲ್ಲೂಕಿನ ಈ ಕೆಳಗೆ ನಮೂದಾಗಲ್ಪಡುವ ಜಮ್ಮಾ ಕಾಫಿ ಸಾಗುವಳಿಗೋಸ್ಕರ ಇದರ ಕೆಳಗಿನ ಸ್ಪೇಷಿಮೆಂಟಿನ ಪಠಾ ಕಾಲಂನಲ್ಲಿ ನಮೂದಾಗುವ ತಾರೀಖು ಮತ್ತು ಸ್ಥಳದಲ್ಲಿ ಮಂಜರಾಬಾದ್ ತಾಲ್ಲೂಕು ಅಮಲ್ದಾರ್‌ರವರ ರೂಬರೂ ಹಾಸನ ಡಿಸ್ಟ್ರಿಕ್ಟ್ ಡಿಪ್ಯುಟಿ ಕಮ್ಮಿಷನರ್ ಸಾಹೇಬರವರು ಮಂಜೂರಾತಿಗೆ ಒಳಪಟ್ಟು ಹರಾಜು ಮಾಡಿನಲ್ಪಡುವದು.

2. ಈ ಹರಾಜ್ ಬಹಿರಂಗವಾಗಿ ದಸ್ತೂರು ಪ್ರಕಾರ ಅನುಸರಿಸಿ ಗೊತ್ತಾಗಲ್ಪಟ್ಟ ಎಕರೆಗೆ ಹತ್ತು ರೂಪಾಯಿಗಳ ಮೇಲೆ ಚಡ ದರಖಾಸ್ತು ಮಾಡುವವರ ಹೆಸರಿಗೆ ಬೈದು ಮಾಡಲ್ಪಡುವದು. ದರಖಾಸ್ತುದಾರನಿಂದ ಹಾಜರ್ಮಾಡಲ್ಪಟ್ಟು ಗೊತ್ತಾಗಲ್ಪಟ್ಟ ಖರೀದಿಯ ನಾಲ್ಕರಲ್ಲಿ ಒಂದು ಭಾಗದ ಡಿಪಾಜಿಟ್ ಹಣವು ದರಖಾಸ್ತುದಾರನ ಹೆಸರಿಗೆ ಹರಾಜ್ ನಿಂತ ಪಕ್ಷ ಅವನು ಈ ನೋಟಿಸ್ 4ನೇ ಕ್ಲಾಜ್ ನೋರಿಗೆ ಕೊಡಬೇಕಾದ ಕೇಕಡಾ 25 ರೂಪಾಯಿ ಹರಾಜ್ ಹೋದ ಡಿಪಾಜಿಟ್ಟಿಗೆ ವಜಾ ಮಾಡಲ್ಪಡುವದು ಮತ್ತು ಇತರರು ಚಡದರ ಖಾಸ್ತು ಮಾಡಿ ಅವರಿಗೇನೇ ನಿಂತ ಪಕ್ಷ ದರಖಾಸ್ತುದಾರನ ಠೇವಣಿಯು ವಾಪಸ್ ಮಾಡಲ್ಪಡುವದು.

3. ಗೊತ್ತಾಗಲ್ಪಟ್ಟ ಖರೀದಿಯು ಸರ್ವೇ ಖರ್ಚನ್ನು ಅಡಗಿಸಿಕೊಂಡಿರುತ್ತಲ್ಲದೆ ಸಂದಲ್ ವಿನಹ ವುಳಿಸಿಕೊಳ್ಳಲ್ಪಟ್ಟ ಜಾತಿಯಲ್ಲಾಮರಗಳ ಗವರ್ಮೆಂಟ್ ಹಕ್ಕನ್ನು ಕಾಯ್ದಿಸಿಕೊಂಡಿರುತ್ತೆ ಸಂದಲ್ ಯಾವಾಗ್ಯೂ ಸರಕಾರದ ಹತ್ತಿನದೇ ಆಗಿರುತ್ತೆ.

4. ಚಡದರಖಾಸ್ತುದಾರನು ಹರಾಜ್ ಕೈದಾದ ಒಡನೆಯೇ ಕೇಕಡಾ 25 ರೂಪಾಯಿಗಳ ಮೇರೆ ಕೊಡಬೇಕಲ್ಲದೆ ಬಾಕಿ ಹಣವನ್ನು ಜಾರೀಲಿ ಇರುವ ರೂಲ್ಸ್ ಅನುಸರಿಸಿ ಹರಾಜ್ ಆದ ತಾರೀಖು ಲಾಗಾಯತು 15ನೇ ತಾರೀಖಿನ ದಿವಸದ ಸೂರ್ಯಾಸ್ತಮಯದೊಳಗೆ ಕೊಡಬೇಕು ಹಾಗೆ ಕೊಡದೆ ತಪ್ಪಿದಲ್ಲಿ ಡಿಪಾಜಿಟ್ ಇಟ್ಟು ಮೊಬಲಗು ದಂಡವಾಗಿ ತೆಗದುಕೊಳ್ಳುವದಲ್ಲದೆ ಹರಾಜಿನಲ್ಲಿ ತೆಗದುಕೊಂಡವನ ಅವಗುಣಕ್ಕಾಗಿ ವುನಕ್ಕೆ ಹರಾಜ್ ಮಾಡಿಸಲ್ಪಡುವದು. 2ನೇ ಹರಾಜಿನಲ್ಲಿ ಕಮ್ಮಿಯಾಗುವ ಹಣವನ್ನು ಮೊದಲು ಹರಾಜ್‌ದಾರನಿಂದ ವಸೂಲ್ಮಾಡಲ್ಪಡುತ್ತೆ.

5. ಈ ರೂಲ್ಸ್ ಅನುಸರಿಸಿ ಹರಾಜ್ ಮಾಡಲ್ಪಟ್ಟ ಜಮೀನು 3 ವರುಷ ಮುಗಿತ್ತು ಆಗಿಯೂ ನಂತರ 2 ವರುಷ ಅರ್ಧ ಕಂದಾಯಕ್ಕೂ 6ನೇ ವರುಷದಿಂದ ಪೂರಾ ಕಂದಾಯಕ್ಕೂ ಕೊಡಲ್ಪಡುವದು ಈ ರಿಯಾಯತಿಯನ್ನು ತೋರಿಸುವದಕ್ಕೆ ಮುಂಚೆ ಚಡದರ ಖಾಸ್ತುದಾರನು ಸದರೀ ಜಮೀನಿನಲ್ಲಿ ಇರತಕ್ಕ ಸಾಗುವಳಿ ಲಾಯಕ್ ಪ್ರದೇಶವನ್ನು ನಿಜವಾಗಿಯೂ ಗಿಡ ಹಾಕುವದಕ್ಕೆ ಯತ್ನಪಡದೆ ಅಡವಿಯನ್ನು ತೆಗದು ಮರಗಳನ್ನು ಕಡಿದು ರಾಜೀನಾಮೆ ಕೊಟ್ಟಿದ್ದೇ ಆದರೆ ಮೊದಲು ವರುಷದ ಲಾಗಾಯತು ಪೂರಾ ಕಂದಾಯವನ್ನು ಸರಕಾರಕ್ಕೆ ಕೊಡಲು ಬದ್ಧನಾಗಿ ಮುಚ್ಚಳಿಕೆ ಬರದು ಕೊಡಬೇಕು.

ಸ್ಯೆ ನಂಬರು.	ದರಖಾಸ್ತುದಾರನ ಹೆಸರು.	ಜಮೀನು ಇರತಕ್ಕ ಗ್ರಾಮದ ಹೆಸರು.	ಚಕ್ಕುಬಂದಿ.	ದರಖಾಸ್ತು ಜಮೀನಿನ ವಿಸ್ತೀರ್ಣ. ಎಕರೆ.	ಗುಂಟೆ.	ಆಕಾರ.	ಷರಾ.
7	ಮೆ|| ಜೇಮ್ಸ್ ಹಂಟ್ ಸಾಹೆಬರು.	ಮಂಜರಾಬಾದ್ ತಾ|| ಹೊಸಕೋಟೆ ಜೋ|| ಹೈಮೂರು ಗ್ರಾಮ.	ಪೂರ್ವಕ್ಕೆ ಮುತ್ತಿಗೆ ಗ್ರಾಮದ ಗಡಿ, ಪಶ್ಚಿಮಕ್ಕೆ ಸರ್ವೆ ನಂಬರ್ 5-6 ಮತ್ತು 1ನೇ ಜಮೀರ್ಣ, ದಕ್ಷಿಣಕ್ಕೆ ಸರ್ವೆ 5ನೇ ನಂಬರ್ ಮತ್ತು ಮುತ್ತಿಗೆ ಗಡಿ, ವುತ್ತರಕ್ಕೆ ಸರ್ವೆ 23-22-9 8 ಈ ನಂಬರ್ ಜಮೀರ್ಣಗಳು.	46	7	ಹಂಗಾಮಿ ದರ 1 ರೂಪಾಯಿ ಖಾಯಂದರ 1-8 ರೂಪಾಯಿ ಪ್ರಕಾರ.	1889ನೇ ಇಸವಿ ಜನವರಿ ತಾರೀಖು 25ರಲ್ಲು ಮಂಜರಾಬಾದ್ ಕಾಫಿತೋಟದಲ್ಲಿ ಸಾರ್ವಜನಿಕ ಹರಾಜ್ ಕೂಗಲ್ಪಡುವದು.
12	ಡಿಟೋ	ಡಿಟೋ	ಪೂರ್ವಕ್ಕೆ ಮಲಗಳಲೆ ಗ್ರಾಮದ ಗಡಿ ಪಶ್ಚಿಮಕ್ಕೆ ಸರ್ವೆ 19 18 13ನೇ ನಂಬರ್ ಜಮೀರ್ಣ, ದಕ್ಷಿಣ ಹಳ್ಳ ಮತ್ತು 11 19ನೇ ನಂಬರ್ ಜಮೀನುಗಳು ವುತ್ತರಕ್ಕೆ ಸರ್ವೆ 89ನೇ ನಂ. ಜಮೀರ್ಣ ಮತ್ತು ಮಲಗಳಲೆ ಗ್ರಾಮದ ಗಡಿ.	85	22	ಡಿಟೋ ಮೇರೆ	

ಪಿ. ಎಸ್. ಪೂರ್ಣಯ್ಯ,
ಡೆಪ್ಯೂಟಿ ಕಮ್ಮಿಷನರ್.

ನಗರದ ಡಿವೀಜ್ಯ ಡಿಸ್ಟ್ರಿಕ್ಟ್ ಜಡ್ಜ್‌ರೀಯರವರ ಕೋರ್ಟ್‌ನಲ್ಲಿ.

1888ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 129.

ಮೃತಪಟ್ಟ ಪಾಪಕ್ಕನ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಮೈನರ್ ವೆಂಕಟಸಾಮಿ ಗಾರ್ಡಿಯರ್ ವೆಂಕಟ್ರಮಣನು ಮೃತಪಟ್ಟ ಸದರೀ ಪಾಪಕ್ಕನಿಗೆ ಮೈನನು ಮಗನಾಗಬೇಕೆಂಬ ಹಕ್ಕುದಾರಿ ಮೇಲೆ ಚಿತ್ರದುರ್ಗದ ಸ್ಥಳದ ವೆಂಕಟ್ರಮಣನು ಸದರೀ ವಾಸಸ್ಥರಾಗಿ ಮೃತಪಟ್ಟ ಪಾಪಕ್ಕನ ಜೆಂದಗೀ ಬಗ್ಯಾಗಿ ಬರತಕ್ಕ 350 ರೂಪಾಯಿ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ಸ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟ್‌ಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕಟ್ರಮಣನ ಅರ್ಜೀಯನ್ನು 1889ನೇ ಇಸವಿ ಜನವರಿ ತಿಂಗಳು ತಾರೀಖು 30ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೇ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪಾಪಕ್ಕನ ಆಸ್ತಿಗೆ ಹಕ್ಕುದಾರರಾದ ವಿಸ್ತಾರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1888ನೇ ಇಸವಿ ಡಿಸಂಬರ್ ತಿಂಗಳು 18ನೇ ತಾರೀಖಿನಲ್ಲಿ ಕೋರ್ಟ್ ಮೊಹರ್ ನೀ ನಮ್ಮದಸ್ತಖತ್ತೊಡನೇ ಕೊಡೋಣಾಗಿದೆ.